# POLICE PUBLIC SCHOOL

(Managed by PPS(CBSE) TRUST)
Koramangala, Bengaluru-560034, Karnataka
Email: ppsk.bssc@gmail.com
Website: www.policepublicschoolksrpblr.org
Telephone No: 080-25506765,
6362598124

## VIBES SEPTEMBER 2025

### ಸಿಬಿಎಸ್‌ಇ ಕ್ಲಸ್ಟರ್ 8ನೇ ಖೋ-ಖೋ ಸ್ಪರ್ಧೆ



ರೆಸ್ ಕಾನ್ಸೆಪ್ಟ್ ಶಾಲೆ, ರಾಯಚೂರು ಇವರು ಆಯೋಜಿಸಿದ್ದ ಸಿಬಿಎಸ್‌ಇ ಕ್ಲಸ್ಟರ್ 8ನೇ ಖೋ-ಖೋ ಸ್ಪರ್ಧೆಯಲ್ಲಿ 19 ವರ್ಷದೊಳಗಿನ ಬಾಲಕರ ತಂಡವು ಭಾಗವಹಿಸಿತು. ವಿದ್ಯಾರ್ಥಿಗಳು ತಮ್ಮ ಪ್ರತಿಭೆ, ಏಕತೆ ಮತ್ತು ಕ್ರೀಡಾಸ್ಫೂರ್ತಿಯನ್ನು ಪ್ರದರ್ಶಿಸಿ, ದ್ವಿತೀಯ ರನ್ನರ್-ಅಪ್ ಸ್ಥಾನವನ್ನು ಪಡೆದು ಕಂಚಿನ ಪದಕವನ್ನು ಪಡೆದುಕೊಂಡರು. ಅದೇ ರೀತಿ 14 ವರ್ಷದೊಳಗಿನ ಬಾಲಕರ ತಂಡವು ಪಾಲ್ಗೊಂಡು ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿತು. ಈ ಸಾಧನೆ ನಮ್ಮ ಶಾಲೆಯ ಹೆಮ್ಮೆಯ ವಿಷಯವಾಗಿದ್ದು, ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ. ಈ ಸಾಧನೆಗೆ ಕೊಡುಗೆ ನೀಡಿದ ಎಲ್ಲಾ ಆಟಗಾರರು, ತರಬೇತಿದಾರರಿಗೆ ಅಭಿನಂದನೆಗಳು.

### ಪುಟಾಣಿ ವಿಜ್ಞಾನ ಪರೀಕ್ಷೆ



ಸೆಪ್ಟೆಂಬರ್ 3 ಮತ್ತು 4 ರಂದು ವಿದ್ಯಾರ್ಥಿಗಳಲ್ಲಿ ವಿಜ್ಞಾನ ಕುರಿತು ಆಸಕ್ತಿ ಬೆಳೆಸುವ ಉದ್ದೇಶದಿಂದ 1 ರಿಂದ 10ನೇ ತರಗತಿಯವರೆಗೆ ಪುಟಾಣಿ ವಿಜ್ಞಾನ ಪರೀಕ್ಷೆ ಆಯೋಜಿಸಲಾಯಿತು. ವಿಜ್ಞಾನ ಸಂಬಂಧಿತ ಸಾಮಾನ್ಯ ಜ್ಞಾನ, ದಿನನಿತ್ಯದ ಜೀವನದಲ್ಲಿ ಉಪಯೋಗವಾಗುವ ವಿಜ್ಞಾನ ತತ್ವಗಳು, ಪ್ರಕೃತಿ ಹಾಗೂ ಪರಿಸರ ಕುರಿತು ತಿಳುವಳಿಕೆ ಇತ್ಯಾದಿ ವಿಷಯಗಳನ್ನು ಒಳಗೊಂಡ ಪ್ರಶ್ನೆಗಳಿಗೆ ಉತ್ತರಿಸಿ ತಮ್ಮ ಸಾಮರ್ಥ್ಯವನ್ನು ತೋರಿಸಿದರು. ಈ ಪರೀಕ್ಷೆಯ ಮೂಲಕ ಮಕ್ಕಳಲ್ಲಿ ವಿಜ್ಞಾನ ಮನೋಭಾವನೆ ಬೆಳೆಯುವಂತೆ ಹಾಗೂ ಅಧ್ಯಯನದಲ್ಲಿ ಕುತೂಹಲ ಹೆಚ್ಚುವಂತೆಯೂ ಆಯಿತು. ಫಲಿತಾಂಶವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು.

### ರಾಷ್ಟ್ರೀಯ ಪೋಷಣಾ ದಿನ




ಸೆಪ್ಟೆಂಬರ್ 1ರಿಂದ 7ರವರೆಗೆ ರಾಷ್ಟ್ರೀಯ ಪೋಷಣಾ ವಾರವನ್ನು ಆಚರಿಸಲಾಯಿತು. ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಆಹಾರದ ಮಹತ್ವವನ್ನು ತಿಳಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕರು ಪೋಷಕಾಂಶಗಳ ಮಹತ್ವ ಕುರಿತು ಮಾತನಾಡಿದರು. ವಿದ್ಯಾರ್ಥಿಗಳು ಪೌಷ್ಠಿಕ ಆಹಾರದ ಮಹತ್ವವನ್ನು ತಿಳಿಸುವ ಭಾಷಣ, ಕವನ ಹಾಗೂ ನಾಟಕಗಳನ್ನು ಪ್ರದರ್ಶಿಸಿದರು.

ಪೋಷಕಾಂಶಯುಕ್ತ ಆಹಾರ ಸೇವನೆ, ಹಣ್ಣು-ತರಕಾರಿ ತಿನ್ನುವ ಅಭ್ಯಾಸ ಮತ್ತು ಸರಿಯಾದ ಜೀವನಶೈಲಿಯ ಕುರಿತು ಜಾಗೃತಿ ಮೂಡಿಸಲಾಯಿತು.ಶಾಲೆಯ ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ಈ ಆಚರಣೆ ವಿದ್ಯಾರ್ಥಿಗಳಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಸಹಾಯಕವಾಯಿತು.

## ವೃತ್ತಿ ಮಾರ್ಗದರ್ಶನ - ವಿಧಿ ವಿಜ್ಞಾನ ಪ್ರಯೋಗಾಲಯದ ಕುರಿತು








ವಿಧಿ ವಿಜ್ಞಾನ ಪ್ರಯೋಗಾಲಯದ ವತಿಯಿಂದ ವೃತ್ತಿ ಮಾರ್ಗದರ್ಶನ ಕುರಿತು ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದ ಉದ್ದೇಶವು ವಿದ್ಯಾರ್ಥಿಗಳಿಗೆ ಅಪರಾಧ ತನಿಖೆ, ವಿಜ್ಞಾನಾಧಾರಿತ ಪರಿಶೀಲನೆ ಮತ್ತು ಭವಿಷ್ಯದ ವೃತ್ತಿ ಅವಕಾಶಗಳ ಬಗ್ಗೆ ಅರಿವು ಮೂಡಿಸುವುದಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀಮತಿ ಶ್ರೀವಿದ್ಯಾ ಸಹಾಯಕ ನಿರ್ದೇಶಕರು(ಎಫ್ ಎಸ್ ಎಲ್) ವಿದ್ಯಾರ್ಥಿಗಳಿಗೆ ವಿಧಿ ವಿಜ್ಞಾನ ಪ್ರಯೋಗಾಲಯದ ವಿವಿಧ ವಿಭಾಗಗಳು - ಬೆರಳಚ್ಚು ಗುರುತು, ಡಿ.ಎನ್.ಎ. ಪರೀಕ್ಷೆ, ವಿಷಶಾಸ್ತ್ರ, ಕ್ರೈಂ ಸೀನ್ ಇನ್ವೆಸ್ಟಿಗೇಷನ್ ಮತ್ತು ಡಿಜಿಟಲ್ ವಿಧಿ ವಿಜ್ಞಾನ ಪ್ರಯೋಗಾಲಯ - ಇವುಗಳ ಪರಿಚಯ ಮಾಡಿಕೊಟ್ಟರು. ವಿದ್ಯಾರ್ಥಿಗಳು ಕುತೂಹಲದಿಂದ ಪ್ರಶ್ನೆಗಳನ್ನು ಕೇಳಿ, ತನಿಖಾ ವಿಜ್ಞಾನದಲ್ಲಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಸಾಧ್ಯತೆಗಳ ಬಗ್ಗೆ ತಿಳಿದುಕೊಂಡರು. ಒಟ್ಟಾರೆ, ಈ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ವಿಧಿ ವಿಜ್ಞಾನ ಪ್ರಯೋಗಾಲಯದ ಮಹತ್ವವನ್ನು ತಿಳಿಸುವುದರೊಂದಿಗೆ, ಸಮಾಜ ಸೇವೆಗೆ ವಿಜ್ಞಾನದ ಮೂಲಕ ಕೊಡುಗೆ ನೀಡುವ ಪ್ರೇರಣೆಯನ್ನು ನೀಡಿತು.

## ರಾಷ್ಟ್ರೀಯ ಸಾಕ್ಷರತಾ ದಿನಾಚರಣೆ




ಸೆಪ್ಟೆಂಬರ್ 12 ರಂದು ರಾಷ್ಟ್ರೀಯ ಸಾಕ್ಷರತಾ ದಿನದ ವಿಶೇಷ ಸಭೆಯನ್ನು ಆಯೋಜಿಸಲಾಯಿತು. ಈ ದಿನದ ಉದ್ದೇಶವು ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಸಾಕ್ಷರತೆಯ ಮಹತ್ವವನ್ನು ಅರಿಯುವುದು. ವಿದ್ಯಾರ್ಥಿಗಳು ಭಾಷಣಗಳು, ಪದ್ಯಗಳು, ಹಾಗೂ ಸಣ್ಣ ನಾಟಕಗಳ ಮೂಲಕ ಓದು ಮತ್ತು ಬರವಣಿಗೆಯ ಮಹತ್ವವನ್ನು ತಿಳಿಸಿದರು.ಶಿಕ್ಷಕರು ಸಾಕ್ಷರತಾ ಲಾಭ, ಜ್ಞಾನಾಭಿವರ್ಧನೆ ಮತ್ತು ಸಮಾಜದ ಉನ್ನತಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ವಿವರಿಸಿದರು.ಕಾರ್ಯಕ್ರಮದ ಕೊನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಪ್ರತಿಜ್ಞೆ ತೆಗೆದುಕೊಂಡರು. ಕಾರ್ಯಕ್ರಮವು ಬಹಳ ಪ್ರೇರಣಾದಾಯಕ ಮತ್ತು ವಿದ್ಯಾರ್ಥಿಗಳಲ್ಲಿ ಜ್ಞಾನ ಮತ್ತು ಸಾಕ್ಷರತಾ ಕುರಿತು ಅರಿವು ಮೂಡಿಸುವಂತಾಯಿತು.

## ELDROK India K-12 Expo 2025 ರ ಗೌರವ ಪ್ರಶಸ್ತಿ.






ELDROK India K-12 Expo 2025 ರ ಗೌರವ ಪ್ರಶಸ್ತಿ (Honoured at Eldrok India K-12 Expo 2025)ಪ್ರಶಸ್ತಿ: ಬೆಂಗಳೂರಿನ EBISU ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ELDROK India K-12 Expo 2025 ಕಾರ್ಯಕ್ರಮದಲ್ಲಿ ನಮ್ಮ ಶಾಲೆಯನ್ನು ಗೌರವಿಸಲಾಗಿದೆ. “ಬೋಧನೆಯಲ್ಲಿ ಶ್ರೇಷ್ಠತೆಗಾಗಿ" (Excellence in Pedagogy) ಪ್ರಶಸ್ತಿಯನ್ನು ಶಾಲೆಯು ಪಡೆದುಕೊಂಡಿದೆ. ಈ ಪ್ರತಿಷ್ಠಿತ ಮಾನ್ಯತೆಯನ್ನು ELDROK India ಅವರು Smart Schools ವಿಭಾಗದಲ್ಲಿ ಒದಗಿಸಿರುವ ನಿರಂತರ ಪ್ರಯತ್ನಗಳು, ಸಮಗ್ರ ಶಿಕ್ಷಣ ಮತ್ತು ಧನಾತ್ಮಕ ಗುರುತಿಗಾಗಿ ನೀಡಿದ್ದಾರೆ. ಈ ಪ್ರಶಸ್ತಿಯು ನಾವೀನ್ಯತೆ, ಅಂತರ್ಗತ ಮತ್ತು ಸುಸ್ಥಿರ ಶೈಕ್ಷಣಿಕ ಪದ್ಧತಿಗಳಿಗೆ ಶಾಲೆಯ ಬದ್ಧತೆಯನ್ನು ಬಲಪಡಿಸಿದೆ.

## ಮಧ್ಯ ವಾರ್ಷಿಕ ಪರೀಕ್ಷೆ

ಸೆಪ್ಟೆಂಬರ್ 8 ರಿಂದ 24ರವರೆಗೆ ಮಧ್ಯ ವಾರ್ಷಿಕ ಪರೀಕ್ಷೆ ಯಶಸ್ವಿಯಾಗಿ ನಡೆಯಿತು. ಎಲ್ಲಾ ವಿದ್ಯಾರ್ಥಿಗಳು ಶಿಸ್ತಿನಿಂದ ಪರೀಕ್ಷೆಗೆ ಹಾಜರಾಗಿ ತಮ್ಮ ಶೈಕ್ಷಣಿಕ ಸಾಮರ್ಥ್ಯವನ್ನು ತೋರಿದರು. ಶಿಕ್ಷಕರು ಪರೀಕ್ಷೆಗಳ ನಿರ್ವಹಣೆಯನ್ನು ಸೂಕ್ತವಾಗಿ ಕೈಗೊಂಡು ಶಾಂತ ಹಾಗೂ ಶಿಸ್ತಿನ ವಾತಾವರಣದಲ್ಲಿ ಪರೀಕ್ಷೆಗಳನ್ನು ಪೂರ್ಣಗೊಳಿಸಿದರು.








## ವಿದ್ಯಾರ್ಥಿಗಳ ವಾರ್ಷಿಕ ಆರೋಗ್ಯ ತಪಾಸಣೆ









ಸೆಪ್ಟೆಂಬರ್ 15 ರಿಂದ 22 ರವರೆಗೆ ವಿದ್ಯಾರ್ಥಿಗಳ ಆರೋಗ್ಯ ಕಾಪಾಡುವ ಉದ್ದೇಶದಿಂದ ವಾರ್ಷಿಕ ಆರೋಗ್ಯ ತಪಾಸಣೆಯನ್ನು ನಡೆಸಲಾಯಿತು. ಎಲ್ಲಾ ವಿದ್ಯಾರ್ಥಿಗಳು ಈ ತಪಾಸಣೆಯಲ್ಲಿ ಭಾಗವಹಿಸಿದರು.ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ತಂಡವು ವಿದ್ಯಾರ್ಥಿಗಳ ಎತ್ತರ, ತೂಕ, ಕಣ್ಣು, ಹಲ್ಲು, ಕಿವಿ ಮತ್ತು ಸಾಮಾನ್ಯ ಆರೋಗ್ಯದ ತಪಾಸಣೆಯನ್ನು ಮಾಡಿ. ಅಗತ್ಯ ಸಲಹೆ ಮತ್ತು ಮಾರ್ಗದರ್ಶನಗಳನ್ನು ವೈದ್ಯರು ವಿದ್ಯಾರ್ಥಿಗಳಿಗೆ ನೀಡಿದರು.ಈ ಆರೋಗ್ಯ ತಪಾಸಣೆಯ ಮೂಲಕ ವಿದ್ಯಾರ್ಥಿಗಳಲ್ಲಿ ಆರೋಗ್ಯ ಜಾಗೃತಿ ಮೂಡಿಸಲು ಸಾಧ್ಯವಾಯಿತು.

## ಶಿಕ್ಷಕರ ದಿನಾಚರಣೆ


















ಸೆಪ್ಟೆಂಬರ್ 16 ರಂದು ಶಿಕ್ಷಕರ ದಿನವನ್ನು ಗೌರವದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಬಸವರಾಜ್ ಜಿಳ್ಳೆ, ಕೆಎಸ್‌ಪಿಎಸ್, ಡಿಐಜಿಪಿ, ಕೆಎಸ್‌ಆರ್‌ಪಿ ಹಾಗೂ ಕಾರ್ಯದರ್ಶಿ, ಮತ್ತು ಶ್ರೀ ಜನಾರ್ಧನ ಆರ್, ಕೆಎಸ್‌ಪಿಎಸ್, ಕಮಾಂಡಂಟ್ 4ನೇ ಬೆಟಾಲಿಯನ್, ಕೆಎಸ್‌ಆರ್‌ಪಿ ಹಾಗೂ ಸಹ ಕಾರ್ಯದರ್ಶಿ, ಪ್ರಾಂಶುಪಾಲರು ಶ್ರೀಮತಿ ರಾಧಿಕಾ ಗೋಸ್ವಾಮಿ ಮತ್ತು ಮುಖ್ಯೋಪಾಧ್ಯಾಯರು ಶ್ರೀಮತಿ ಅರ್ಚನಾ ಗುಪ್ತಾ ಉಪಸ್ಥಿತರಿದ್ದರು. ಕಾರ್ಯಕ್ರಮವು ಶ್ರೀ ಸ್ಕಂದ ಕುಮಾರ್ ಮತ್ತು ಅವರ ತಂಡದಿಂದ ಗಾಯನದಿಂದ ಪ್ರಾರಂಭವಾಯಿತು. ನಂತರ ಶ್ರೀಮತಿ ಮಾನಸಾ ಕೃಷ್ಣ ಬಿ. ಸ್ವಾಗತ ಭಾಷಣವನ್ನು ನೀಡಿದರು. ಗಣ್ಯರು ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು, ಇದು ಜ್ಞಾನ ಹಾಗೂ ವಿವೇಕದ ಸಂಕೇತವಾಗಿತ್ತು. ಶ್ರೀಮತಿ ಮಂಜುಳಾ ಎಂ.ಸಿ. ಅವರು ಶಿಕ್ಷಕರ ದಿನದ ಮಹತ್ವದ ಕುರಿತು ಮಾತನಾಡಿ, ಭವಿಷ್ಯ ತಲೆಮಾರನ್ನು ರೂಪಿಸುವಲ್ಲಿ ಶಿಕ್ಷಕರ ಮೌಲ್ಯವನ್ನು ವಿವರಿಸಿದರು. ಪ್ರತಿಯೊಬ್ಬ ಶಿಕ್ಷಕರಿಗೂ ಪ್ರೀತಿ ಮತ್ತು ಕೃತಜ್ಞತೆಯ ಸಂಕೇತವಾಗಿ ಗುಲಾಬಿ ಹೂವನ್ನು ನೀಡಿ ಸನ್ಮಾನಿಸಲಾಯಿತು.









ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀ ಬಸವರಾಜ ಜಿಳ್ಳೆಯವರು ತಮ್ಮ ಪ್ರೇರಣಾದಾಯಕ ಮಾತುಗಳ ಮೂಲಕ ಕಾರ್ಯಕ್ರಮವನ್ನು ಇನ್ನಷ್ಟು ಅರ್ಥಪೂರ್ಣಗೊಳಿಸಿದರು. ಅತಿಥಿಗಳು ತಮ್ಮ ಭಾಷಣದಲ್ಲಿ ಶಿಕ್ಷಕರ ಮಹತ್ವವನ್ನು ಉಲ್ಲೇಖಿಸಿ, ಶಿಕ್ಷಕರು ವಿದ್ಯಾರ್ಥಿಗಳ ಜೀವನದಲ್ಲಿ ಮಾರ್ಗದರ್ಶಕರೂ ಪ್ರೇರಕರೂ ಆಗಿದ್ದಾರೆಂದು ಹೇಳಿದರು. ಅವರು ಶಿಕ್ಷಣವು ಕೇವಲ ಪಾಠಪುಸ್ತಕಗಳಿಗೆ ಸೀಮಿತವಾಗದೆ, ಮೌಲ್ಯಗಳು, ನೈತಿಕತೆ ಮತ್ತು ಜೀವನಪಾಠಗಳನ್ನು ಕಲಿಸುವುದರಲ್ಲಿಯೂ ಶಿಕ್ಷಕರ ಪಾತ್ರ ಅಪ್ರತಿಮವೆಂದು ವಿವರಿಸಿದರು.ಕೊನೆಯದಾಗಿ, ಎಲ್ಲಾ ಸಿಬ್ಬಂದಿ ಸದಸ್ಯರು ಮತ್ತು ಅಟೆಂಡರ್‌ಗಳಿಗೆ ಕೃತಜ್ಞತೆಯ ಸಂಕೇತವಾಗಿ ಉಡುಗೊರೆಗಳನ್ನು ವಿತರಿಸಲಾಯಿತು. ಕಾರ್ಯಕ್ರಮವು ಶ್ರೀಮತಿ ಜಯಶ್ರೀ ಎಸ್. ಅವರ ಧನ್ಯವಾದದೊಂದಿಗೆ ಮುಕ್ತಾಯವಾಯಿತು, ಅವರು ಯಶಸ್ಸಿಗೆ ಕಾರಣರಾದ ಮತ್ತು ಕೊಡುಗೆ ನೀಡಿದ ಎಲ್ಲರಿಗೂ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಈ ಆಚರಣೆಯು ಶಿಕ್ಷಕರಿಗೆ ಒಂದು ನಿಜವಾದ ಗೌರವವಾಗಿದ್ದು, ಪ್ರತಿಯೊಬ್ಬರಿಗೂ ಆತ್ಮೀಯತೆ, ಗೌರವ ಮತ್ತು ಸಂತೋಷವನ್ನುಂಟು ಮಾಡಿತು. ಸೆಪ್ಟೆಂಬರ್ 3 ರಂದು, ಹೊಯ್ಸಳ ಹೌಸ್ ಶಿಕ್ಷಕರ ದಿನವನ್ನು ಆಚರಿಸಲು ಒಂದು ವಿಶೇಷ ಸಭೆಯನ್ನು ನಡೆಸಿತು. ವಿದ್ಯಾರ್ಥಿಗಳು ಶಿಕ್ಷಕರ ಮಹತ್ವವನ್ನು ವಿವರಿಸುವ ಭಾಷಣ, ಕವನ ಹಾಗೂ ನಾಟಕಗಳನ್ನು ಪ್ರದರ್ಶಿಸಿದರು. ವಿದ್ಯಾರ್ಥಿಗಳು ತಾವೇ ಕೈಯಿಂದ ತಯಾರಿಸಿದ ಶುಭಾಶಯ ಪತ್ರಗಳು ಹಾಗೂ ಹೂವುಗಳನ್ನು ನೀಡಿ ಶಿಕ್ಷಕರನ್ನು ಗೌರವಿಸಿದರು. ವಿದ್ಯಾರ್ಥಿಗಳ ಕಲಿಕೆಯಲ್ಲಿ ಹಾಗೂ ವ್ಯಕ್ತಿತ್ವ ನಿರ್ಮಾಣದಲ್ಲಿ ಶಿಕ್ಷಕರು ವಹಿಸುವ ಅಮೂಲ್ಯ ಪಾತ್ರವನ್ನು ಎಲ್ಲರೂ ಸ್ಮರಿಸಿದರು. ಈ ದಿನವು ಶಿಕ್ಷಕರಿಗೆ ಗೌರವ ಸೂಚಿಸುವುದರ ಜೊತೆಗೆ, ವಿದ್ಯಾರ್ಥಿ-ಶಿಕ್ಷಕರ ನಡುವಿನ ಆತ್ಮೀಯ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸಿತು.

## ವಿಶ್ವ ಆತ್ಮಹತ್ಯೆ ತಡೆ ದಿನಾಚರಣೆ



















ಸೆಪ್ಟೆಂಬರ್ 19 ರಂದು ವಿಶ್ವ ಆತ್ಮಹತ್ಯೆ ತಡೆ ದಿನವನ್ನು 10ನೇ ತರಗತಿಯ ವಿದ್ಯಾರ್ಥಿಗಳು ಆತ್ಮಹತ್ಯೆಯ ಕುರಿತು ದೃಷ್ಟಿಕೋನ ಬದಲಿಸುವುದು ಎಂಬ ವಿಷಯದ ಮೇಲೆ ಕಿರು ನಾಟಕ, ಕವನ, ಚಿತ್ರಬಿಡಿಸುವ ಹಾಗೂ ಭಾಷಣಗಳ ಮೂಲಕ ಆತ್ಮಹತ್ಯೆ ತಡೆಗೆ ಸಂಬಂಧಿಸಿದ ಸಂದೇಶಗಳನ್ನು ಹಂಚಿಕೊಂಡರು. ವಿಶ್ವ ಆತ್ಮಹತ್ಯೆ ತಡೆ ದಿನಾಚರಣೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿ, ಸಹಾನುಭೂತಿ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಯಶಸ್ವಿಯಾಯಿತು.

## ನವರಾತ್ರಿ ಆಚರಣೆ






ಸೆಪ್ಟೆಂಬರ್ 23 ರಂದು ನವರಾತ್ರಿ ಹಬ್ಬವನ್ನು ಭಕ್ತಿಭಾವದಿಂದ ಮತ್ತು ಸಂತೋಷದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಶಾಲೆಯಲ್ಲಿ ಗೊಂಬೆ ಅಲಂಕಾರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಬಣ್ಣ ಬಣ್ಣದ ಗೊಂಬೆಗಳು, ದೇವರ ಪ್ರತಿಮೆಗಳು ಹಾಗೂ ಸಾಂಪ್ರದಾಯಿಕ ಅಲಂಕಾರಗಳು ಎಲ್ಲರ ಗಮನ ಸೆಳೆಯುವಂತಾಗಿತ್ತು.ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಕೃತಿ, ಸಂಪ್ರದಾಯ ಮತ್ತು ಹಬ್ಬಗಳ ಮಹತ್ವವನ್ನು ತಿಳಿಸಿಕೊಟ್ಟಿತು.

## ಇಗ್ನೈಟಿಂಗ್ ಯಂಗ್ ಮೈಂಡ್ಸ್: ಸ್ಪಾರ್ಕ್ ಲ್ಯಾಬ್



ಶಾಲೆಯು ಯುನೈಟೆಡ್ ವೇ (United Way) ಸಹಯೋಗದೊಂದಿಗೆ 'ಸ್ಪಾರ್ಕ್ ಲ್ಯಾಬ್' ಅನ್ನು ಉದ್ಘಾಟಿಸಿದೆ. ಇದು ನಾವೀನ್ಯತೆ, ಸೃಜನಶೀಲತೆ ಮತ್ತು ಹ್ಯಾಂಡ್ಸ್-ಆನ್ ಕಲಿಕೆಯನ್ನು ಉತ್ತೇಜಿಸುವ ಉತ್ಸಾಹಭರಿತ ಸ್ಥಳವಾಗಿದೆ.ವಿನ್ಯಾಸ ಚಿಂತನೆ ಮತ್ತು ಸಮಸ್ಯೆ-ಪರಿಹಾರಕ್ಕೆ ಸಾಧನಗಳನ್ನು ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಅಧಿಕಾರ ನೀಡುವ ಅನುಭವಾತ್ಮಕ ಶಿಕ್ಷಣದ ಕಡೆಗೆ ಇಟ್ಟ ಮಹತ್ವದ ಹೆಜ್ಜೆಯಾಗಿದೆ.ಸೆಪ್ಟೆಂಬರ್ 24 ರಂದು, ನಮ್ಮ ಪ್ರಾಂಶುಪಾಲರು ಹಾಗೂ ಶ್ರೀಮತಿ ಮಾನಸಾ ಕೃಷ್ಣ ಬಿ. ಗ್ಲೋಬಲ್ ನೆಕ್ಸ್ಟ್ ಇಂಜಿನಿಯರ್ಸ್ ಪ್ರೋಗ್ರಾಂ ಉದ್ಘಾಟನಾ ಸಮಾರಂಭದಲ್ಲಿ ಶಾಲೆಯನ್ನು ಪ್ರತಿನಿಧಿಸಿದರು. ಈ ಕ್ರಮವು ಭವಿಷ್ಯದ ಇಂಜಿನಿಯರ್‌ಗಳನ್ನು ಪ್ರೇರೇಪಿಸುವ ಮತ್ತು STEM (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಮತ್ತು ಗಣಿತ) ಕ್ಷೇತ್ರದಲ್ಲಿ ವೈವಿಧ್ಯತೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

## ಸ್ಪಾರ್ಕ್ಲಿಂಗ್ ಕ್ಯಾಂಪ್ 2025








ಸೆಪ್ಟೆಂಬರ್ 25 ರಿಂದ 30 ರವರೆಗೆ ಶಾಲೆಯಲ್ಲಿ ಸ್ಪಾರ್ಕ್ಲಿಂಗ್ ಕ್ಯಾಂಪ್ ಅನ್ನು ನಡೆಸಲಾಯಿತು.ಇದು ಅಗಸ್ತ್ಯ ಇಂಟರ್ನ್ಯಾಷನಲ್ ಫೌಂಡೇಶನ್ ಸಹಯೋಗದೊಂದಿಗೆ 5 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿತ್ತು.ಕ್ಯಾಂಪ್ ಸೃಜನಶೀಲತೆ, ತಾರ್ಕಿಕ ಚಿಂತನೆ, ಮತ್ತು ಸಮಸ್ಯೆ-ಪರಿಹಾರದ ಕೌಶಲ್ಯಗಳನ್ನು ಹೆಚ್ಚಿಸಲು ವಿನ್ಯಾಸಗೊಳಿಸಲಾದ ವಿವಿಧ ಆಟಗಳು, ಪ್ರಯೋಗಗಳು ಮತ್ತು ಚಟುವಟಿಕೆಗಳನ್ನು ಒಳಗೊಂಡಿತ್ತು.

## ದಸರಾ ರಜೆಯಲ್ಲಿ 10 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ಹೆಚ್ಚುವರಿ ತರಗತಿಗಳು

ಸೆಪ್ಟೆಂಬರ್ 25 ರಿಂದ 30ರವರೆಗೆ ಬೋರ್ಡ್ ಪರೀಕ್ಷೆಗಳು ಮತ್ತು ಮುಂಬರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ದೃಷ್ಟಿಯಿಂದ, ದಸರಾ ಹಬ್ಬದ ರಜಾದಿನಗಳಲ್ಲಿ 10 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ ವಿಶೇಷ ಹೆಚ್ಚುವರಿ ತರಗತಿಗಳನ್ನು ಆಯೋಜಿಸಲಾಗಿತ್ತು.

## ನವರಾತ್ರಿ  ಮತ್ತು ಆಯುಧ ಪೂಜೆ ಆಚರಣೆ











ನವರಾತ್ರಿಯ ಹಬ್ಬವನ್ನು ಸಡಗರದಿಂದ ಆಚರಿಸಲಾಯಿತು. ಹಬ್ಬದ ಪ್ರಯುಕ್ತ ಆಯುಧ ಪೂಜೆ ಮತ್ತು ಸರಸ್ವತಿ ಪೂಜೆ ನೇರವೇರಿಸಲಾಯಿತು. ವಿದ್ಯಾರ್ಥಿಗಳು ಶಾಲೆಯ ಪ್ರಯೋಗಾಲಯದ ಉಪಕರಣಗಳು, ಕ್ರೀಡಾ ಸಾಮಗ್ರಿಗಳು,  ಮತ್ತು ಪಾಠೋಪಕರಣಗಳಿಗೆ ಪೂಜೆ ಸಲ್ಲಿಸಿದರು. ಈ ಮೂಲಕ ಶ್ರದ್ಧೆ, ಮತ್ತು ಭಕ್ತಿಯನ್ನು ಅರ್ಪಿಸಿದರು.

*That’s a wrap for now!*
*We’ll be back soon with more updates, fun features, and school highlights.*
*Thanks for staying connected!*